ಮೂಲ ದಾವಾ ಸಂಖ್ಯೆ. 82/2015 ಡಿ ಡಬ್ಲ್ಯೂ 2

(ದಿನಾಂಕ 08-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಎಂ ಎಸ್ ವಕೀಲರಿಂದಃ-

ನನಗೆ ಈಗ 63 ವರ್ಷ ವಯಸ್ಸು ಇರುತ್ತದೆ. ಮೂಲತಃ ನಾನು ಆಂದ್ರಪ್ರದೇಶ ರಾಜ್ಯದವನು. ಸರ್ವೆ ನಂ.140 ಸಿ/3, 3 ಎಕರೆ 50 ಸೆಂಟ್ಸ ಜಮೀನನ್ನು ನನ್ನ ಅತ್ತಿಗೆ ಅನ್ನಪೂರ್ಣ ಇವರು ಈಗ ಸುಮಾರು 25 ವರ್ಷದ ಹಿಂದೆ ಖರೀದಿಸಿದ್ದಾರೆ. ಸದರಿ ಖರೀದಿಯಾದ 25 ವರ್ಷದಿಂದ ಈಚೆ ವಿಚಾರ ನನಗೆ ಗೊತ್ತು ಅದಕ್ಕಿಂತ ಹಿಂದಿನ ವಿಚಾರ ನನಗೆ ಗೊತ್ತಿಲ್ಲವೆಂದರೆ ಸರಿ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ 50 ವರ್ಷದಿಂದ ಪ್ರತಿವಾದಿಗಳು ಸ್ವಾಧೀನಾನುಭವದಲ್ಲಿರುತ್ತಾರಂತಾ ನಾನು ಹೇಳಿ ಬರೆಸಿಲ್ಲ. ದಾವಾಸ್ತಿ ಮೂಲತಃ ಯಾರದ್ದು ಅದು ಯಾರಿಂದ ಯಾರಿಗೆ ಖರೀದಿಯಾಯಿತು ಎಂದು ನನಗೆ ಗೊತ್ತಿಲ್ಲ. ದಾವಾಸ್ತಿಯ ಚಕ್ಕುಬಂದಿ ಪೂಃಗಂಗಾಧರ ಶಾಸ್ತ್ರಿಯವರ ಜಮೀನು, ಪಃ ಫಕೀರಪ್ಪ ಮತ್ತು ಕೊಟ್ರಮ್ಮ ಇವರ ಜಮೀನು, ಉಃಅಗಸರ ಫಕೀರಪ್ಪ ಇವರ ಜಮೀನು, ದಃ ನಮ್ಮದೇ ಜಮೀನು ಇರುತ್ತದೆ. ನಾನು ಆಂಧ್ರದಿಂದ ಇಲ್ಲಿಗೆ ಬಂದ ನಂತರದಿಂದ ನನಗೆ ಪ್ರತಿವಾದಿಯು ಎಲ್ಲಾ ರೀತಿಯಿಂದ ಸಹಕಾರ ನೀಡಿರುತ್ತಾನೆಂದರೆ ಸುಳ್ಳು. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ದಾವಾಸ್ತಿಯ ಬಗ್ಗೆ ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸಹಾ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ